*

**ಓಎಸ್ ನಂಃ 70/2021**
**ಪಿಡಬ್ಲೂಃ 1**

**<u>ಸಾಕ್ಷಿಗೆ ದಿನಾಂಕ 26-02-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಜಿ.ಎಸ್. ವಕೀಲರಿಂದ</u>

ಪ್ರತಿವಾದಿ ಈಗ ಇವಣಿ ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರು ಎಂದರೆ ಸರಿ. ಪ್ರತಿವಾದಿಯ ಮಗನ ಹೆಸರು ಚಂದ್ರಕಾಂತ್ ಎಂದರೆ ಸರಿ. ಚಂದ್ರಕಾಂತ್ ಹಾಗೂ ಅವನ ಮಗ ಈಗ Transport Business ಮಾಡುತ್ತಾರೆ ಎಂದರೆ ಸರಿ. ಪ್ರತಿವಾದಿ ಕುಟುಂಬದವರು ಮೊದಲಿನಿಂದಲೂ ಆರ್ಥಿಕವಾಗಿ ಸದೃಢವಾಗಿದ್ದರು ಎಂದರೆ ಸಾಕ್ಷಿ ಮೊದಲು ಇರಲಿಲ್ಲ ಈಗ ಸದೃಢವಾಗಿದ್ದಾರೆ ಎಂದು ನುಡಿಯುತ್ತಾರೆ. ಮೂಲ ದಾವೆ ಸಂಖ್ಯೆ 69/2021 ನೇದ್ದರ ಪ್ರತಿವಾದಿಯಾದ ಸಾಬಮ್ಮಳ ಮಗಳನ್ನು ಚಂದ್ರಕಾಂತ್ ಇವರೊಂದಿಗೆ ಮದುವೆ ಮಾಡಿ ಕೊಡಲಾಗಿದೆ ಎಂದರೆ ಸರಿ. ಸದರಿ ಮದುವೆಯನ್ನು ವಿಜ್ರಂಭಣೆಯಿಂದ ಮಾಡಲಾಗಿದೆ ಎಂದರೆ ಸಾಕ್ಷಿ ನನಗೆ ದಾವಾ ಆಸ್ತಿಯನ್ನು ಬರೆದುಕೊಟ್ಟ ನಂತರ ಮದುವೆ ಆಗಿದೆ ಎಂದು ನುಡಿಯುತ್ತಾರೆ.

ನೀವು ಮೊದಲಿನಿಂದಲೂ ಮುಂಬೈನಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿ ನಾನು ಮುಂಬೈ ಮತ್ತು ಇವಣಿ ಎರಡೂ ಜಾಗದಲ್ಲಿ ಬಂದು ಹೋಗಿ ಮಾಡುತ್ತೇನೆಂದು ನುಡಿಯುತ್ತಾರೆ. ನೀವು ಮುಂಬೈಯಲ್ಲಿ ಮಾತ್ರ ವಾಸವಾಗಿ ಖಾಸಗಿ ಕೆಲಸ ಮಾಡಿಕೊಂಡು ನಿಮ್ಮ ಹೊಟ್ಟೆಪಾಡಿಗೆ ಆಗುವಷ್ಟು ಮಾತ್ರ ದುಡಿಯುತ್ತೀರಿ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಕರಾರು ಪತ್ರ ಮಾಡಿಕೊಳ್ಳುವಾಗ ನಮ್ಮ ಕುಟುಂಬಕ್ಕೆ ಸುಮಾರು 20 ಎಕ್ರೆ ಆಸ್ತಿ ಇತ್ತು. ನಿಮಗೆ 20 ಎಕ್ರೆ ಆಸ್ತಿ ಇತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ 20 ಎಕ್ರೆ ಆಸ್ತಿ ಬಗ್ಗೆ ನಾನು ನ್ಯಾಯಾಲಯದಲ್ಲಿ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಾವು ಸದರಿ 20 ಎಕ್ರೆ ಆಸ್ತಿಯಲ್ಲಿ ಕಳೆದ 20 ವರ್ಷದಿಂದ ಒಕ್ಕಲುತನ ಮಾಡುತ್ತಿದ್ದೇವೆ. ನೀವು 20 ಎಕ್ರೆ ಆಸ್ತಿಯಲ್ಲಿ ಒಕ್ಕಲುತನ ಮಾಡುತ್ತಿದ್ದೀರಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಹೊಲದ ಮಾರಾಟದ ಕುರಿತು ಮಾತುಕತೆ ಯಲ್ಲಾಲಿಂಗ್ ಪೂಜಾರಿಯವರ ಮನೆಯಲ್ಲಿ 05.04.2012ರಲ್ಲಿ ಆಗಿರುತ್ತದೆ. ಸದರಿ ಮಾತುಕತೆ ಬಗ್ಗೆ ನಿಮ್ಮ ದಾವೆಯಲ್ಲಿ ನಮುದು ಮಾಡಿದ್ದೀರಾ ಎಂದರೆ ಸಾಕ್ಷಿ ನಮೂದು ಮಾಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಮಾತುಕತೆಯ ಬಗ್ಗೆ ನಿಪಿ-1ರಲ್ಲಿ ಸಹ ನಮೂದು ಇದೆ. ಸದರಿ ಮಾತುಕತೆ ಸಮಯದಲ್ಲಿ 4-5 ಜನರು ಅಲ್ಲಿದ್ದರು. ಅವರ ಹೆಸರುಗಳು ಕಾಶಪ್ಪ, ಸೂರ್ಯಕಾಂತ್, ಮರೆಪ್ಪ ಮತ್ತು ಬಾಬುರಾಮ್ ಆಗಿತ್ತು. ಸದರಿ ಮಾತುಕತೆ ಸಮಯದಲ್ಲಿ ಪ್ರತಿವಾದಿ ದಾವಾ ಆಸ್ತಿಗಾಗಿ ರೂ.5,00,000/- ಕೇಳಿದ್ದು, ಮಾತುಕತೆ ಮಾಡಿ ದಾವಾ ಆಸ್ತಿಯ ಕರಾರನ್ನು ರೂ.4,25,000/-ಕ್ಕೆ ಮುಗಿಸಿಕೊಂಡಿರುತ್ತೇವೆ. ಸದರಿ ಮಾತುಕತೆಯಲ್ಲಿ ಪ್ರತಿವಾದಿ 3 ದಿನಗಳಲ್ಲಿ ಖರೀದಿ ಪತ್ರ ಬರೆದುಕೊಡುತ್ತೇನೆಂದು ಒಪ್ಪಿ ಕೊಂಡಿದ್ದರು. ಯಲ್ಲಾಲಿಂಗ್ ಪೂಜಾರಿಯವರ ಮನೆಯಲ್ಲಿ ಮಾತುಕತೆ ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.